# ‘ಬೇಸ್‌ಬಾಲ್’ ರಾಷ್ಟ್ರದಲ್ಲಿ ವಿಶ್ವಕಪ್ ಕಂಪು

ಜಗತ್ತಿನ ಸರ್ವಶ್ರೇಷ್ಠ ಕ್ರೀಡಾಕೂಟದಲ್ಲಿ ಅಗ್ರಸ್ಥಾನದಲ್ಲಿರುವ ಒಲಿಂಪಿಕ್ಸ್‌ನಲ್ಲಿ ಹೆಚ್ಚು ಪದಕಗಳನ್ನು ಗೆದ್ದ ಹೆಗ್ಗಳಿಕೆ ಹೊಂದಿರುವ ಹಾಗೂ ಬೇಸ್‌ಬಾಲ್ ರಾಷ್ಟ್ರೀಯ ಕ್ರೀಡೆಯಾಗಿರುವ ಅಮೆರಿಕದಲ್ಲಿ ಮೊದಲ ಬಾರಿಗೆ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಕಂಪು ಹರಡುತ್ತಿದೆ.

ಅಮೆರಿಕದ ತಂಡ 1965ರಲ್ಲಿ ಐಸಿಸಿಯ ಸಹ ಸದಸ್ಯತ್ವ ಹೊಂದಿದ್ದರೂ ಅಲ್ಲಿನ ಸರ್ಕಾರ ಮತ್ತು ಆರ್ಥಿಕ ಬಿಕ್ಕಟ್ಟಿನ ಕಾರಣದಿಂದಾಗಿ ಸದಸ್ಯತ್ವ ಕಳೆದುಕೊಂಡಿತ್ತು. ಐದು ವರ್ಷಗಳ ಹಿಂದೆಯಷ್ಟೇ ಅಮೆರಿಕ ಮರಳಿ ಸಹ ಸದಸ್ಯತ್ವ ಪಡೆದುಕೊಂಡಿತು. 2004ರಲ್ಲಿ ಮೊದಲ ಬಾರಿಗೆ ಅಂತರರಾಷ್ಟ್ರೀಯ ಏಕದಿನ ಪಂದ್ಯವನ್ನಾಡಿತ್ತು. ಹಿಂದೆ ಐಸಿಸಿ ಚಾಂಪಿಯನ್ಸ್ ಟ್ರೋಫಿ, ಐಸಿಸಿ ಇಂಟರ್‌ನ್ಯಾಷನಲ್ ಕಪ್, ವಿಶ್ವ ಕ್ರಿಕೆಟ್ ಲೀಗ್‌ನಲ್ಲಿ ವಿವಿಧ ಡಿವಿಷನ್ ಪಂದ್ಯಗಳು, ಅಮೆರಿಕನ್ ಚಾಂಪಿಯನ್‌ಷಿಪ್ ಹೀಗೆ ಅನೇಕ ಟೂರ್ನಿಗಳಲ್ಲಿ ಆಡಿ ಅನುಭವ ಗಳಿಸಿಕೊಂಡಿದೆ. ಅಮೆರಿಕದ ತಂಡ 51 ಏಕದಿನ ಮತ್ತು 25 ಅಂತರರಾಷ್ಟ್ರೀಯ ಟಿ–20 ಪಂದ್ಯಗಳನ್ನಾಡಿದೆ.

ಬೇಸ್‌ಬಾಲ್ ಕ್ರೀಡೆಗೆ ಅಮೆರಿಕ ಖ್ಯಾತಿ ಪಡೆದಿದೆ. ಒಲಿಂಪಿಕ್ಸ್‌ನಲ್ಲಿ ಹೆಚ್ಚು ಪದಕಗಳನ್ನು ಗೆಲ್ಲುವ ಅಥ್ಲೀಟ್‌ಗಳನ್ನು ಹೊಂದಿರುವ ಪ್ರತಿಭಾವಂತರ ದೇಶವದು. ಆದರೆ ಕ್ರಿಕೆಟ್‌ನಲ್ಲಿ ಹೇಳಿಕೊಳ್ಳುವಷ್ಟು ಸಾಧನೆ ಮಾಡಿಲ್ಲವಾದರೂ ಮೊದಲ ಬಾರಿಗೆ ಪ್ರತಿಷ್ಠಿತ ಟೂರ್ನಿಗೆ ಸಹ ಆತಿಥ್ಯ ವಹಿಸುವ ಮೂಲಕ ತನ್ನ ದೇಶದಲ್ಲಿ ಕ್ರಿಕೆಟ್‌ನ ಬೇರು ಗಟ್ಟಿಗೊಳಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗಿದೆ. ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ಈ ಬಾರಿಯ ಟೂರ್ನಿ ಆಯೋಜನೆಯಾಗಿದೆ.



ಟಿ20 ವಿಶ್ವಕಪ್ 2024 ಮಹಾಸಮರದ ಉದ್ಘಾಟನಾ ಪಂದ್ಯ ನಡೆಯಲಿರುವ ಅಮೆರಿಕದ ದಲ್ಲಾಸ್‌ನ ಗ್ರ್ಯಾಂಡ್ ಪ್ರೈರೀ ಕ್ರಿಕೆಟ್ ಮೈದಾನ

ಟ್ರೋಫಿ ಬರವನ್ನು ಭಾರತ ಈ ಬಾರಿ ದೂರ ಮಾಡುವ ವಿಶ್ವಾಸವಿದೆ. ಅದಕ್ಕೆ ತಕ್ಕ ಆಟಗಾರರು ತಂಡದಲ್ಲಿದ್ದರೂ, ಭಾರತ ಮೇಲಿಂದ ಮೇಲೆ ಅನುಭವಿಸುತ್ತಿರುವ ‘ನಾಕೌಟ್ ಫೋಬಿಯಾ’ ಕ್ರೀಡಾಭಿಮಾನಿಗಳಲ್ಲಿ ಕೊಂಚ ಅಳುಕು ಮೂಡಿಸಿರುವುದೂ ಸುಳ್ಳಲ್ಲ.



ಹಿಂದಿನ ಹನ್ನೊಂದು ವರ್ಷಗಳಿಂದ ಮೇಲಿಂದ ಮೇಲೆ ಕಾಡುತ್ತಿರುವ ನಾಕೌಟ್ ಗುಮ್ಮದ ಗೆರೆ ದಾಟುವುದು ಹೇಗೆ ಎನ್ನುವ ಲೆಕ್ಕಾಚಾರದಲ್ಲಿ ಭಾರತ ತಂಡವಿದೆ. ಐಸಿಸಿ ಟೂರ್ನಿಯಲ್ಲಿ ಭಾರತ ತಂಡ 2011ರಲ್ಲಿ ಮಹೇಂದ್ರ ಸಿಂಗ್ ಧೋನಿ ನಾಯಕತ್ವದಲ್ಲಿ ಏಕದಿನ ವಿಶ್ವಕಪ್ ಗೆದ್ದುಕೊಂಡಿತ್ತು. ಕೊನೆಯ ಬಾರಿಗೆ 2013ರಲ್ಲಿ ಚಾಂಪಿಯನ್ಸ್ ಟ್ರೋಫಿ ಮುಡಿಗೇರಿತ್ತು. ಈ ಟೂರ್ನಿಯ ಬಳಿಕ ಭಾರತಕ್ಕೆ ಐಸಿಸಿ ಟ್ರೋಫಿ ಮರೀಚಿಕೆಯಾಗಿದೆ. ಚಾಂಪಿಯನ್ ಆದ ನಂತರದ ಎರಡು ಟೂರ್ನಿಗಳಲ್ಲಿ ಎರಡು ಬಾರಿ ಸೆಮಿಫೈನಲ್ ಮತ್ತು ಕಳೆದ ವರ್ಷ ತವರಿನಲ್ಲಿ ಫೈನಲ್‌ನಲ್ಲಿ ಸೋತು ರನ್ನರ್ಸ್ ಅಪ್ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡಿದೆ. 2021 ಹಾಗೂ 2023ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಸೋಲು ಕಂಡಿದೆ. 2017ರ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ನಿರಾಸೆ ಅನುಭವಿಸಿದೆ.

ಆರಂಭಿಕ ಹಂತದಲ್ಲಿ ಭಾರತದ ಆಟಗಾರರು ತೋರುವ ಬದ್ಧತೆ, ಸ್ಥಿರ ಪ್ರದರ್ಶನ ಮತ್ತು ಆಕ್ರಮಣಕಾರಿ ಆಟವನ್ನು ನೋಡಿದರೆ ಭಾರತ ಈ ಬಾರಿ ಪ್ರಶಸ್ತಿ ಗೆಲ್ಲುವುದು ನಿಶ್ಚಿತ ಎನ್ನುವ ಭರವಸೆ ಪ್ರತಿಬಾರಿಯೂ ಮೂಡುತ್ತದೆ. ಆದರೆ, ಹಂತಹಂತವಾಗಿ ಮುಂದಕ್ಕೆ ಹೋದಂತೆಲ್ಲ ನಿರಾಸೆಯೇ ಕಾಡುತ್ತಿದೆ. ವಿಶ್ವ ಟಿ–20 ಟೂರ್ನಿಯ ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗಲೂ ಪ್ರಶಸ್ತಿ ಸಮೀಪದಲ್ಲಿ ಸೋಲಿನ ನಿರಾಶೆಯ ಕಥನ ಪುನರಾವರ್ತನೆ ಆಗಿದ್ದಕ್ಕೆ ನಿದರ್ಶನಗಳಿವೆ.

ಟಿ–20 ವಿಶ್ವಕಪ್‌ನ ಚೊಚ್ಚಲ ಟೂರ್ನಿ 2007ರಲ್ಲಿ ಆರಂಭವಾದಾಗ ಮೊದಲು ಟ್ರೋಫಿ ಎತ್ತಿ ಹಿಡಿದಿದ್ದೇ ಭಾರತ ತಂಡ. ಆಗ ಧೋನಿಯೇ ನಾಯಕರಾಗಿದ್ದರು. ಗೌತಮ್ ಗಂಭೀರ್, ಯುಸೂಫ್ ಪಠಾಣ್, ಯುವರಾಜ ಸಿಂಗ್, ಜೋಗಿಂದರ್ ಶರ್ಮಾ, ಕರ್ನಾಟಕದ ರಾಬಿನ್ ಉತ್ತಪ್ಪ ಅವರ ಬಲವಿತ್ತು. ಇದಾದ ಬಳಿಕ ಟ್ರೋಫಿ ಸಮೀಪ ಬಂದರೂ ಭಾರತಕ್ಕೆ ಚಾಂಪಿಯನ್ಸ್ ಎನಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಇದುವರೆಗೆ ಒಂಬತ್ತು ಬಾರಿ ಚುಟುಕು ವಿಶ್ವಕಪ್ ನಡೆದಿದ್ದು ,ಭಾರತ ಒಂದು ಸಲವಷ್ಟೇ ಚಾಂಪಿಯನ್ ಆಗಿದೆ. ನಾಲ್ಕು ಬಾರಿ ಎರಡನೇ ಸುತ್ತಿನಲ್ಲಿ ಮುಗ್ಗರಿಸಿದ್ದು, 2014ರಲ್ಲಿ ಫೈನಲ್ ತಲುಪಿ



ವಿರಾಟ್ ಕೊಹ್ಲಿ: ಐಪಿಎಲ್ ಕೊಯಿಲು ವಿಶ್ವಕಪ್‌ನಲ್ಲೂ ಸಾಧ್ಯವಾದೀತೆ?